# ಕನ್ನಡ ಸಾಹಿತ್ಯ ಐಚ್ಛಿಕ ವಿಷಯ

ಮೊದಲನೆಯದಾಗಿ, ದೇಶದ ಅತ್ಯಂತ ಉತ್ಕೃಷ್ಟ ಹಾಗೂ ಕಠಿಣವಾದ ಯುಪಿಎಸ್ಸಿ ನಾಗರಿಕ ಸೇವಾ ಪರೀಕ್ಷೆಯನ್ನು ಎದುರಿಸಲು ಪಣತೊಟ್ಟಿರುವ ನಿಮಗೆ ಅಭಿನಂದನೆ ಹಾಗೂ ಶುಭಾಶಯಗಳು. ಪ್ರತಿ ವರ್ಷ ಸರಿ ಸುಮಾರು 10 ಲಕ್ಷ ಅಭ್ಯರ್ಥಿಗಳು ನೋಂದಾಯಿಸುವ ಈ ಪರೀಕ್ಷೆಯಲ್ಲಿ ಆಯ್ಕೆಯಾಗುವುದು ಸುಮಾರು 900 ಅರ್ಹ ಅಭ್ಯರ್ಥಿಗಳು ಮಾತ್ರ. ನೋಂದಾಯಿಸಿದ ಎಲ್ಲರೂ ಕಠಿಣ ಶ್ರಮ ಪಡುತ್ತಾರೆ ಎಂದಲ್ಲ ಅದರಲ್ಲಿ ಸುಮಾರು ೧೦% ಅಭ್ಯರ್ಥಿಗಳು ಮಾತ್ರ ಒಂದು ಮಟ್ಟದಲ್ಲಿ ಯೋಜನಾಬದ್ಧವಾಗಿ ಶಿಸ್ತಿನ ಪ್ರಯತ್ನ ಮಾಡಿರುತ್ತಾರೆ ಎಂಬುದು ನಮ್ಮ ಅನುಭವ ಮೂಲವಾದ ಸತ್ಯ.

ಪೂರ್ವಭಾವಿ ಪರೀಕ್ಷೆಯಿಂದ ತೇರ್ಗಡೆ ಹೊಂದಿ ಮುಖ್ಯ ಪರೀಕ್ಷೆಗೆ ಹಾಜರಾಗುವವರ ಸಂಖ್ಯೆ ಸುಮಾರು 11 ರಿಂದ 12 ಸಾವಿರವಾದರೆ , ವ್ಯಕ್ತಿತ್ವ ಪರೀಕ್ಷೆ (personality test) ಗೆ ಬಡ್ತಿ ಪಡೆಯುವವರು ಸುಮಾರು 2.5 ಸಾವಿರ ಅಭ್ಯರ್ಥಿಗಳು ಮಾತ್ರ. ಕಡೆಗೆ ಒಟ್ಟಾರೆ ಅಂಕಗಳಲ್ಲಿ ಮುಖ್ಯ ಪರೀಕ್ಷೆಯ ಅಂಕಗಳೂ ಸೇರಿಸಿ ಅಭ್ಯರ್ಥಿಗಳನ್ನು ಆಯ್ಕೆಮಾಡಲಾಗುತ್ತದೆ . ಹಾಗಾಗಿ ಇಲ್ಲಿ ನೀವು ಗಮನಿಸಬೇಕಾದದ್ದು **ಮುಖ್ಯ ಪರೀಕ್ಷೆಯ ಅಂಕಗಳ ಮಹತ್ವ**ವನ್ನು.
ಮುಖ್ಯ ಪರೀಕ್ಷೆಯಲ್ಲಿ ಸಾಮಾನ್ಯ ಅಧ್ಯಯನದ ಪತ್ರಿಕೆಗಳು ಅಂಕಗಳಿಸಲು ಎಲ್ಲರಿಗೂ ಸಮಾನವದ ಭೂಮಿಕೆಯನ್ನು ಕಲ್ಪಿಸುತ್ತವೆ ಆದರೆ ಐಚ್ಛಿಕ ವಿಷಯದ ಪತ್ರಿಕೆಗಳು ನಿಮ್ಮ ಅಂಕಗಳನ್ನು ಅತಿ ಹೆಚ್ಚಿನ ಮಟ್ಟದಲ್ಲಿ ಉತ್ತಮಗೊಳಿಸಿಕೊಳ್ಳಲು ವಿಶೇಷವಾದ ಅವಕಾಶವನ್ನು ಕಲ್ಪಿಸಿ ಕೊಡುತ್ತವೆ . ಉದಾಹರಣೆಗೆ : ಸಾಮಾನ್ಯ ಅಧ್ಯಯನ ಪತ್ರಿಕೆಗಳಲ್ಲಿಅಗತ್ಯವಾದ ಶ್ರಮ ಹಾಗೂ ಉತ್ತಮವಾದ ಉತ್ತರಗಳಿಂದ ಇತರರ ಸಾಮಾನ್ಯ ಉತ್ತರ ಪತ್ರಿಕೆಗಳಿಗಿಂತ 10-12 ಅಂಕಗಳ ವ್ಯತ್ಯಾಸವನ್ನು ಹೆಚ್ಚಿಸಿಕೊಳ್ಳಬಹುದಾದರೆ , ಐಚ್ಛಿಕ ವಿಷಯದ ಪತ್ರಿಕೆಗಳಿಂದ ಅಗತ್ಯ ಶ್ರಮವನ್ನು ವಹಿಸಿ ಯೋಜನಬದ್ಧವಾದ ತಯಾರಿ ನಡೆಸಿದಲ್ಲಿ ಇತರ ಸಾಮಾನ್ಯ ಉತ್ತರ ಪತ್ರಿಕೆಗಳಿಗಿಂತ ಸುಮಾರು 50 ರಿಂದ 60 ಅಂಕಗಳನ್ನು ಹೆಚ್ಚಿಸಿಕೊಳ್ಳಬಹುದು. ಹಾಗಾಗಿ ನಿಮ್ಮ ಮನಸ್ಸಿಗೆ ಬಹುವಾಗಿ ಹೊಂದಿಕೊಳ್ಳುವ , ನಿಮ್ಮ ಆತ್ಮವಿಶ್ವಾಸಕ್ಕೆ ಅನುಗುಣವಾದ , ಅತಿ ಹೆಚ್ಚು ಅಂಕಗಳನ್ನು ತಂದುಕೊಡುವ ಐಚ್ಛಿಕ ವಿಷಯವನ್ನು ಬಹಳ ಎಚ್ಚರಿಕೆಯಿಂದ ಆಯ್ದುಕೊಳ್ಳುವುದು ತುಂಬಾ ಮುಖ್ಯವಾಗುತ್ತದೆ .

ಐಚ್ಛಿಕ ವಿಷಯದ ಆಯ್ಕೆ ಮಾಡುವಾಗ ಅಭ್ಯರ್ಥಿಗಳು ಹಲವಾರು ಗೊಂದಲಗಳಿಗೀಡಾಗುವುದು ಸಹಜ . ಅದರಲ್ಲಿ ಮುಖ್ಯವಾದದ್ದು , ಸಾಮಾನ್ಯ ಅಧ್ಯಯನಕ್ಕೂ ಅನುಕೂಲವಾಗುವ ಐಚ್ಛಿಕ ವಿಷಯವನ್ನು ಆಯ್ದುಕೊಳ್ಳುವುದು ಸೂಕ್ತವೇ ಎಂಬುದು. ಐಚ್ಛಿಕ ವಿಷಯಗಳಲ್ಲಿ ಅನೇಕ ವಿಷಯಗಳು ಇತರೆ ಸಾಮಾನ್ಯ ಅಧ್ಯಯನ ಪತ್ರಿಕೆಗಳಿಗೂ ಅನುಕೂಲವಗುವಂತಿವೆ ಉದಾ : ಇತಿಹಾಸ , ಭೂಗೋಳ ಶಾಸ್ತ್ರ ಇತ್ಯಾದಿ. ಈ ವಿಷಯಗಳನ್ನು ಆಯ್ದುಕೊಂಡಲ್ಲಿ ಎರಡು ಲಾಭವಾಗುವುದಂತೂ ಸರಿ

ಆದರೆ ನಾವಿಲ್ಲಿ ಪ್ರಾಮುಖ್ಯತೆ ನೀಡಬೇಕಾದದ್ದು, ಐಚ್ಛಿಕ ವಿಷಯವಾಗಿ ಈ ವಿಷಯ ಎಷ್ಟು ಹೆಚ್ಚು ಅಂಕಗಳನ್ನು ತಂದು ಕೊಡಬಹುದು ಎಂಬುದರ ಬಗ್ಗೆ. ನೀವು ಆಯ್ದುಕೊಂಡ ಐಚ್ಛಿಕ ವಿಷಯ ನಿಮಗೆ ಸಾಧಾರಣ ಅಂಕಗಳನ್ನು ತಂದು ಕೊಟ್ಟು, ಸಾಮಾನ್ಯ ಅಧ್ಯಯನ ಪತ್ರಿಕೆಯಲ್ಲಿ ಇತರರಿಗಿಂತ ಒಂದು 10 ಅಕಂಗಳನ್ನು ಹೆಚ್ಚು ಗಳಿಸುವಲ್ಲಿ ಸಹಾಯವಾದರೆ ಅದರ ಉದ್ದೇಶ ಫಲಪ್ರದವಾಗುವುದಿಲ್ಲ ಏಕೆಂದರೆ ಮೊದಲೇ ಹೇಳಿದ ಹಾಗೆ ಉತ್ತಮ ಐಚ್ಛಿಕ ವಿಷಯವನ್ನು ಆಯ್ದುಕೊಂಡು ಅಗತ್ಯ ಶ್ರಮವಹಿಸಿದರೆ ಇತರರಿಗಿಂತ 50 ರಿಂದ 60 ಅಂಕಗಳ ಮುನ್ನಡೆಯನ್ನು ಪಡೆಯಬಹುದು. ಹಾಗಾಗಿ ಐಚ್ಛಿಕ ವಿಷಯವನ್ನು ಕೇವಲ ಐಚ್ಛಿಕ ವಿಷಯವಾಗಿಯೇ ನೋಡಿ , ಅದು ನಿಮಗೆ ತಂದುಕೊಡುವ ಅಂಕಗಳ ಲಾಭದ ಅನುಸಾರವಾಗಿ ಆಯ್ಕೆ ಮಾಡಿಕೊಳ್ಳುವುದು ಅತ್ಯಂತ ಸೂಕ್ತ .

ಈ ಹಿನ್ನೆಲೆಯಲ್ಲಿ ಕಳೆದ 6-7 ವರ್ಷಗಳಿಂದ ಕರ್ನಾಟಕದ ಅಭ್ಯರ್ಥಿಗಳು ಆಯ್ದುಕೊಂಡ ಐಚ್ಛಿಕ ವಿಷಯಗಳನ್ನು ಗಮನಿಸಿದಾಗ, ಕನ್ನಡ ಸಾಹಿತ್ಯ ಐಚ್ಛಿಕ ವಿಷಯ ಪ್ರತಿ ವರ್ಷವೂ ಹೆಚ್ಚು ಮಾನ್ಯತೆ ಪಡೆದುಕೊಳ್ಳುತ್ತಿದೆ . "ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ" ಎಂಬ ಕುವೆಂಪುರವರ ವಾಣಿ ಕನ್ನಡ ಸಾಹಿತ್ಯ ಐಚ್ಛಿಕ ವಿಷಯದಲ್ಲಿ ಬಹುತೇಕವಾಗಿ ಸತ್ಯವಾಗಿದೆ. ಇದಕ್ಕೆ ಹಲವಾರು ಅಂಶಗಳು ಪುಷ್ಟಿಕೊಡುತ್ತವೆ . ಅದರಲ್ಲಿ ಬಹು ಮುಖ್ಯವಾದದ್ದು ತೇರ್ಗಡೆಯ ಪ್ರಮಾಣ . 2017 ರ ಫಲಿತಾಂಶವನ್ನು ಹೊರತು ಪಡಿಸಿ ಕನ್ನಡ ಸಾಹಿತ್ಯ ಐಚ್ಛಿಕ ವಿಷಯವನ್ನು ತೆಗೆದುಕೊಂಡು ಪರೀಕ್ಷೆ ಬರೆದ ವಿದ್ಯಾರ್ಥಿಗಳಲ್ಲಿ ಪ್ರತಿ ವರ್ಷ ಸರಾಸರಿ **ಶೇ. 10** ರಷ್ಟು ವಿದ್ಯಾರ್ಥಿಗಳು ಆಯ್ಕೆಯಾಗುತ್ತಿದ್ದಾರೆ. ಬಹುಮುಖ್ಯವಾಗಿ **2016** ರಲ್ಲಿ ಅತಿ ಹೆಚ್ಚು ಎಂದರೆ ಸುಮಾರು **16.4%** ರಷ್ಟು ಅಭ್ಯರ್ಥಿಗಳು ತೇರ್ಗಡೆಯಾಗಿದ್ದಾರೆ ಅದರಲ್ಲಿ ನಮ್ಮ ಸಂಸ್ಥೆಯ ಹೆಮ್ಮೆಯ ವಿದ್ಯಾರ್ಥಿನಿಯಾದ ನಂದಿನಿ ಕೆ ಆರ್ ರವರು ಇಡೀ ದೇಶಕ್ಕೆ ಪ್ರಥಮ ಸ್ಥಾನವನ್ನು ಗಳಿಸಿದ್ದರು . ಕಳೆದ 6-7 ವರ್ಷಗಳ ಫಲಿತಾಂಶಗಳ ವಿಶ್ಲೇಷಣೆಗಳ ಪ್ರಕಾರ ಸಾಹಿತ್ಯ ಐಚ್ಛಿಕ ವಿಷಯವನ್ನು ಮೊದಲ 5 ಉತ್ತಮ ಐಚ್ಛಿಕ ವಿಷಯಗಳಲ್ಲಿ ಒಂದಾಗಿ ಗುರುತಿಸಲಾಗುತ್ತದೆ.

**<u>2016 ನೇ ಸಾಲಿನ ಐಚ್ಛಿಕ ವಿಷಯವಾರು ತೇರ್ಗಡೆಯ ಸರಾಸರಿ</u>**

| ಐಚ್ಛಿಕ ವಿಷಯ | ಹಾಜರಾದ ಅಭ್ಯರ್ಥಿಗಳು | ತೇರ್ಗಡೆಯಾದವರು | ಶೇಕಡಾವಾರು ಉತ್ತೀರ್ಣತೆ |
|---|---|---|---|
| ಕನ್ನಡ ಸಾಹಿತ್ಯ | 84 | 14 | 16.4% |
| ಆಂಥ್ರೊಪೊಲಜಿ | 345 | 37 | 10.7% |
| ಸಾರ್ವಜನಿಕ ಆಡಳಿತ | 3301 | 337 | 10.5% |
| ರಾಜ್ಯಶಾಸ್ತ್ರ ಮತ್ತು ಅಂತರಾಷ್ಟ್ರೀಯ ಸಂಬಂಧಗಳು | 1320 | 85 | 6.4% |
| ಭೂಗೋಳಶಾಸ್ತ್ರ | 4049 | 236 | 5.8% |
| ಸಮಾಜಶಾಸ್ತ್ರ | 1555 | 89 | 5.7% |
| ತತ್ವಶಾಸ್ತ್ರ | 2092 | 84 | 4% |

.

ಕನ್ನಡ ಸಾಹಿತ್ಯ ಐಚ್ಛಿಕ ವಿಷಯವನ್ನು ಸೂಕ್ತ, ಸಮಗ್ರ ಹಾಗು ಸಮರ್ಪಕವಾಗಿ ಅಭ್ಯಾಸ ಮಾಡಿದಲ್ಲಿ 300 ಕ್ಕೂ ಹೆಚ್ಚು ಅಂಕಗಳನ್ನು ಪಡೆಯುವುದು ಸುಲಭ ಸಾಧ್ಯ ಎಂಬುದನ್ನು ಅನೇಕ ಅಭ್ಯರ್ಥಿಗಳು ಈಗಾಗಲೇ ತೋರಿಸಿಕೊಟ್ಟಿದ್ದಾರೆ. ಈ ಸಾಧನೆಯನ್ನು ಮಾಡಲು ಕನ್ನಡ ಸಾಹಿತ್ಯದ ಹಿನ್ನೆಲೆ ಇರಲೇಬೇಕೆಂಬ ಪೂರ್ವಾಗ್ರಹ ಬೇಡ . ಇದಕ್ಕೆ ಯಾವ ನಿಶ್ಚಿತ ಹಿನ್ನೆಲೆಯ ಅವಶ್ಯಕತೆಯೂ ಇಲ್ಲ ಬದಲಾಗಿ ಸಾಹಿತ್ಯದ ಬಗೆಗೆ ಆಸಕ್ತಿ ಇದ್ದರೆ ಅಷ್ಟೇ ಸಾಕು ಎಂಬುದನ್ನು ಇಲ್ಲಿ ಮನಗಾಣುವುದು ಅವಶ್ಯಕ. **2014 ರಲ್ಲಿ 311 ಅಂಕಗಳನ್ನು ಗಳಿಸಿದ ಬಾಲಾಜಿ ಡಿ ಕೆ** ಅವರು ಮೂಲತಃ ಬಿಸಿನೆಸ್ ಮ್ಯಾನೇಜ್ಮೆಂಟ್ (MBA) ಹಿನ್ನೆಲೆಯವರಾಗಿದ್ದರೆ, **2016 ರಲ್ಲಿ 331 ಅಂಕಗಳನ್ನು ಗಳಿಸಿದ ಕೆ.ಆರ್ ನಂದಿನಿ** ಅವರು ಮೂಲತಃ ಒಬ್ಬ ಸಿವಿಲ್ ಇಂಜಿನಿಯರಿಂಗ್ ಪದವೀಧರೆ. ಹಾಗಾಗಿ ನಿಮ್ಮ ಆಸಕ್ತಿ ಹಾಗು ಪರಿಶ್ರಮದ ಬಗೆಗೆ ನಿಮಗೆ ನಂಬಿಕೆ ಇದ್ದಲ್ಲಿ ನಿಮ್ಮ ಹಿನ್ನೆಲೆಯ ಚಿಂತೆ ಬೇಕಿಲ್ಲ.

ಅಲ್ಲದೇ ಕನ್ನಡ ಸಾಹಿತ್ಯ ಐಚ್ಛಿಕ ವಿಷಯದ ಬಗೆಗೆ ಇರುವ ಇನ್ನೊಂದು ಆತಂಕ ಅತ್ಯಂತ ವಿಸ್ತಾರವಾದ ಪಠ್ಯಕ್ರಮ ಮತ್ತು ಅದನ್ನು ಅಭ್ಯಸಿಸಲು ಹೆಚ್ಚು ಸಮಯ ಬೇಕಾಗುತ್ತದೆ ಎಂಬುದು. ಇದನ್ನು ಅಲ್ಲಗೆಳೆಯಲಾಗುವುದಿಲ್ಲ, ಏಕೆಂದರೆ ಸಾಹಿತ್ಯದ ಆಳ ಅಗಲಗಳನ್ನು ಇಷ್ಟೇ ಎಂದು ತೋರಿಸಿಕೊಡಲಾಗುವುದಿಲ್ಲ ಆದರೆ ಮಿತ್ರರೇ ನಿಮಗೆ ಗೊತ್ತೇ? ಕನ್ನಡ ಸಾಹಿತ್ಯ ಪ್ರಶ್ನೆ ಪತ್ರಿಕೆಯಲ್ಲಿ ಪ್ರತಿವರ್ಷ **ಶೇ 80% ಪ್ರಶ್ನೆಗಳು ಪುನರಾವರ್ತಿತವಾಗುತ್ತವೆ** ..!!! ಹೌದು 2019 ರ ಪತ್ರಿಕೆ 1 ರಲ್ಲಿ ಒಟ್ಟು 34 ಪ್ರಶ್ನೆಗಳಲ್ಲಿ 28ಪ್ರಶ್ನೆಗಳು ಹಾಗೂ ಪತ್ರಿಕೆ 2 ರಲ್ಲಿ ಒಟ್ಟು 28 ಪ್ರಶ್ನೆಗಳಲ್ಲಿ 25 ಪ್ರಶ್ನೆಗಳು ಪುನರಾವರ್ತಿತಗೊಂಡಿವೆ..!! ಹಾಗಾಗಿ ನಿಮ್ಮ ಐಚ್ಛಿಕ ವಿಷ್ಯದ ಅಭ್ಯಾಸವನ್ನು ಕ್ರಮಬದ್ಧವಾಗಿ , ಪರೀಕ್ಷಾ ಅಗತ್ಯತೆಗೆ ಅನುಗುಣವಾಗಿ ಆಯೋಜಿಸಿಕೊಂಡಲ್ಲಿ ನಿಮ್ಮ ಅಭ್ಯಾಸದ ಸಮಯವನ್ನೂ ಕಡಿಮೆ ಮಾಡಿಕೊಳ್ಳಬಹುದು. ಅಲ್ಲದೆ ಸಂಸ್ಥೆಯ ತರಗತಿಗಳಲ್ಲಿ ನೀಡುವ ಸೂಕ್ತ ಪಠ್ಯ ಸಾಮಗ್ರಿ ಗಳೂ ನಿಮ್ಮ ಅಭ್ಯಾಸವನ್ನು ಹೆಚ್ಚು ಪರಿಣಾಮಕಾರಿಯಾಗಿಸುತ್ತದೆ ಹಾಗೂ ಅಭ್ಯಾಸದ ಸಮಯವನ್ನೂ ಗಣನೀಯ ಮಟ್ಟದಲ್ಲಿ ಕಡಿಮೆಗೊಳಿಸುತ್ತದೆ.

ಕನ್ನಡ ಸಾಹಿತ್ಯದ ಪಠ್ಯ ಕ್ರಮದ ಬಗೆಗೆ ಇರುವ ಮತ್ತೊಂದು ಭಯ/ಪೂರ್ವಗ್ರಹವೆಂದರೆ **ಹಳಗನ್ನಡ ಸಾಹಿತ್ಯ** ಕ್ಲಿಷ್ಟಕರ ಎಂಬುದು. ಮಿತ್ರರೇ, ಹೌದು ಹಳಗನ್ನಡ ಸಾಹಿತ್ಯ, ಕನ್ನಡ ಸಾಹಿತ್ಯಿಕ ಹಿನ್ನೆಲೆಯುಳ್ಳವರಿಗೂ ಕಠಿಣವೆನಿಸುತ್ತದೆ, ಆದರೆ ನೀವು ಪಠ್ಯಕ್ರಮವನ್ನು ಗಮನಿಸಿದಲ್ಲಿ ವಡ್ಡಾರಾಧನೆ ಹಾಗೂ ಪಂಪಭಾರತವನ್ನು ಹೊರತುಪಡಿಸಿ ಇರುವುದೆಲ್ಲ ಮಧ್ಯಕಾಲೀನ ಸಾಹಿತ್ಯ ಹಾಗೂ ಹೊಸಗನ್ನಡ ಸಾಹಿತ್ಯ ಮಾತ್ರ . ಅದರಲ್ಲಿಯೂ **ವಡ್ಡಾರಾಧನೆ**ಯಲ್ಲಿ ಹಳೆಗನ್ನಡಕ್ಕೆ ಮಹತ್ವ ಕಡಿಮೆ ಅಥವಾ ಇಲ್ಲವೇ ಇಲ್ಲ ಎನ್ನಬಹುದು. ಅದರ ವಿಶ್ಲೇಷಣೆಯನ್ನು ಹೊಸಗನ್ನಡದಲ್ಲಿ ಪ್ರಸ್ತುತ ಪಡಿಸಿದರೆ ನಿಮ್ಮ ಉತ್ತರ ಮಾನ್ಯವಾಗುತ್ತದೆ . ಇನ್ನು **ಪಂಪಭಾರತ**ದಲ್ಲಿ ಇರುವ ಒಟ್ಟು 14 ಆಶ್ವಾಸಗಳಲ್ಲಿ ನಿಮ್ಮ ಪಠ್ಯದಲ್ಲಿರುವುದು ಕೇವಲ 2 ಆಶ್ವಾಸಗಳು. ಪರಿಣಾಮಕಾರಿಯಾದ ವಿಶ್ಲೇಷಣಾತ್ಮಕವಾದ ತರಗತಿಗಳ ಸಹಾಯ ಹಾಗೂ ಸತತ ಪುನರ್ಮನನದಿಂದ ಈ ಆಶ್ವಾಸಗಳ ಮೇಲೆ ಹಿಡಿತ ಸಾಧಿಸುವುದು ಸುಲಭ ಸಾಧ್ಯ.

ಪಠ್ಯಕ್ರಮದ ಇತರೆ ಅಂಶಗಳನ್ನು ಗಮನಿಸಿದಲ್ಲಿ, **ಮಧ್ಯಕಾಲೀನ ಸಾಹಿತ್ಯ**ದಲ್ಲಿ ಚಿರಪರಿಚಿತ **ವಚನ ಸಾಹಿತ್ಯ, ಕೀರ್ತನ ಸಾಹಿತ್ಯ** ಗಳು ನಂತರ ಹೊಸಗನ್ನಡ ಸಾಹಿತ್ಯದಲ್ಲಿ **ಸಣ್ಣ ಕಥೆಗಳು , ಕಾದಂಬರಿಗಳು , ಪ್ರಮುಖ ಕವಿಗಳ ಕವಿತೆಗಳು** ಬಹುಶಃ ನಮ್ಮ ಪರಿಚಯದವೇ ಆಗಿದ್ದು ಅಥವಾ ಅಲ್ಲದಿದ್ದರೂ ಅತ್ಯಂತ ಸುಲಭ ಸುಲಭ ಆಸಕ್ತಿದಾಯಕ ಪಠ್ಯಕ್ರಮದ ಭಾಗಗಳಾಗಿವೆ. ಇನ್ನುಳಿದ **ಜಾನಪದ ಸಾಹಿತ್ಯ ಭಾಗದ ಗೀತೆಗಳು, ಒಗಟುಗಳು, ಗಾದೆಗಳು** ನಮ್ಮ ಜೀವನಾನುಭದಲ್ಲಿ ಬೆಸೆದುಕೊಂಡವೇ ಆಗಿವೆ ಹಾಗೂ **ಕರ್ನಾಟಕ ಸಾಂಸ್ಕೃತಿಕ ಚರಿತ್ರೆ** ಬಹುತೇಕ ಇತಿಹಾಸ ಪಠ್ಯಕ್ರಮದಂತಿದ್ದು ಸಾಹಿತ್ಯಿಕ ಒಳನೋಟ , ವಿಮರ್ಶೆ , ವಿಶ್ಲೇಷಣೆಗಳನ್ನು ಬಯಸುವುದಿಲ್ಲ. ಹಾಗಾಗಿ ಒಟ್ಟಾರೆ, ಸಮರ್ಪಕವಾದ ಮಾರ್ಗದರ್ಶನ ಸಮಗ್ರವಾದ ಮತ್ತು

INSIGHTSIAS

ಸೂಕ್ತವಾದ ಅಧ್ಯಯನ ಸಾಮಗ್ರಿ ನಿಮ್ಮ ಜೊತೆಗಿದ್ದರೆ ಹಾಗೂ ನೀವು ಕನ್ನಡ ಸಾಹಿತ್ಯದಲ್ಲಿ ಆಸಕ್ತರಾಗಿದ್ದರೆ, ನೀವು ಕನ್ನಡ ಐಚ್ಛಿಕ ವಿಷಯವನ್ನು ನಿರ್ಭಯವಾಗಿ ಆಯ್ಕೆ ಮಾಡಿಕೊಳ್ಳಬಹುದು ಅಲ್ಲದೆ ಅತ್ಯಂತ ಆತ್ಮವಿಶ್ವಾಸದಿಂದ ನಿಮ್ಮ UPSC ತಯಾರಿಯನ್ನು ಮಾಡಬಹುದು.

ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ರ್ಯಾಂಕ್ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಿರುವ Insights IAS ಸಂಸ್ಥೆಯಲ್ಲಿ ಕನ್ನಡ ಸಾಹಿತ್ಯವನ್ನು ವರ್ಷದಿಂದ ವರ್ಷಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಇದಕ್ಕೆ ಮೂಲ ಕರಣ ಪರೀಕ್ಷಾ ಅಗತ್ಯತೆಗೆ ಅನುಗುಣವಾಗಿ ರೂಪಿಸಿದ ಹಾಗೂ ಪರೀಕ್ಷೆಯ ಅಗಾಧ ಅನುಭವವುಳ್ಳ ತರಬೇತುದಾರರಿಂದ ನಡೆಸಲ್ಪಡುವ ಶಿಸ್ತುಬದ್ಧ ತರಗತಿಗಳು. ಅಷ್ಟೇ ಅಲ್ಲದೆ, ವಿದ್ಯಾರ್ಥಿಗಳಿಗೆ ಅಗತ್ಯವಾದ ವೈಯಕ್ತಿಕ ಮಾರ್ಗದರ್ಶನ, ತರಗತಿಗಳ ಜೊತೆಜೊತೆಗೆ ನಡೆಸಲ್ಪಡುವ ಕಿರು ಪರೀಕ್ಷೆಗಳು ನಿಮ್ಮ ಅಭ್ಯಾಸವನ್ನು ಹೆಚ್ಚು ತ್ವರಿತವೂ ಹಾಗೂ ಪರಿಣಾಮಕಾರಿಯೂ ಆಗಿಸುತ್ತವೆ. ಹಾಗಾಗಿ Insights IAS ನಲ್ಲಿ ಕನ್ನಡ ಸಾಹಿತ್ಯದ ತರಬೇತಿಯ ಆಯ್ಕೆ ಅತ್ಯಂತ ಸಮರ್ಪಕ ಹಾಗೂ ಸಮಯೋಚಿತವೂವಾದುದು ಎಂಬುದರಲ್ಲಿಎರಡು ಮಾತಿಲ್ಲ. Insights IAS ಸದಾ ನಿಮ್ಮ ಯಶಸ್ಸಿಗೆ ಬೆಂಬಲವಾಗಿರುತ್ತದೆ ಹಾಗು ಅದು ನಿಮ್ಮೊಟ್ಟಿಗಿನ ನಮ್ಮ ಬದ್ಧತೆಯೂ ಕೂಡ . ಶುಭವಾಗಲಿ.

**CLICK HERE for more details of Kannada Literature Optional Subject**

INSIGHTSIAS